2018 ಕ.ತೀ.ವ. 185

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎಸ್. ಪಾಟೀಲ್

## ಶ್ರೀಮತಿ ಕೆ. ಸೀತಮ್ಮ –ವಿರುದ್ಧ– ಕರ್ನಾಟಕ ರಾಜ್ಯ (ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ) ಹಾಗೂ ಇನ್ನೊಬ್ಬರು*

ಭಾರತ ಸಂವಿಧಾನದ 226 ಮತ್ತು 227ನೇ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿ.

ಅರ್ಜಿದಾರರನ್ನು ಬೆಂಗಳೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್‌ರಾಗಿ ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ನಿಯೋಜನೆ ಮಾಡಿದ ಆಡ್‌ಹಾಕ್ ಪ್ರಭಾರದ ಏರ್ಪಾಡನ್ನು ಅನುಬಂಧ–ಎ ಯಲ್ಲಿರುವ ಉನ್ನತ ಶಿಕ್ಷಣ ಇಲಾಖೆ ಮೂಲಕ ರಾಜ್ಯ ಸರ್ಕಾರದಿಂದ ಹೊರಡಿಸಿದ ಅಧಿಸೂಚನೆ ದಿನಾಂಕ 04.04.2013ರ ಮೂಲಕ ಹಿಂತೆಗೆದುಕೊಳ್ಳಲಾದ ಪ್ರಶ್ನಿತ ಅಧಿಸೂಚನೆಯನ್ನು ಅರ್ಜಿದಾರರು ಈ ರಿಟ್ ಅರ್ಜಿಯಲ್ಲಿ ಪ್ರಶ್ನಿಸಿದ್ದಾರೆ.

ಪ್ರಸ್ತುತ ರಿಟ್ ಅರ್ಜಿಯಲ್ಲಿ ಯಾವುದೇ ಕಾರಣಗಳನ್ನು ನೀಡದೇ ರಾಜ್ಯ ಸರ್ಕಾರ ರಿಜಿಸ್ಟ್ರಾರ್ ಹುದ್ದೆಯ ಪ್ರಭಾರದಲ್ಲಿ ಆಕೆಯನ್ನು ನಿಯೋಜನೆ ಮಾಡಿದ್ದ ಅರ್ಜಿದಾರರ ನೇಮಕಾತಿಯ ಆಡ್‌ಹಾಕ್ ಏರ್ಪಾಡನ್ನು ಹಿಂತೆಗೆದುಕೊಂಡು ಪ್ರಶ್ನಿತ ಅಧಿಸೂಚನೆಯನ್ನು ಹೊರಡಿಸಲಾಗಿದೆಯೆಂದು ಅರ್ಜಿದಾರರು ವಾದಿಸಿದ್ದಾರೆ.

ಅರ್ಜಿದಾರರು, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆಂಬುದರಲ್ಲಿ ಯಾವುದೇ ವಿವಾದವಿಲ್ಲ. ಆಕೆಯು, ಸದರಿ ಹುದ್ದೆಯನ್ನು ಹೊಂದುವಾಗ, ಸಾದಿಲ್ವಾರು ವರದಿ ಮೇಲೆ, ಕೋವಾರಂಟು ರಿಟ್‌ನ್ನು ಹೊರಡಿಸಿದ್ದರಿಂದಾಗಿ ಬೆಂಗಳೂರು ವಿಶ್ವವಿದ್ಯಾಲಯ

*ರಿಟ್ ಅರ್ಜಿ ಸಂಖ್ಯೆ: 16233/2013, ದಿನಾಂಕ: 15ನೇ ಜೂನ್, 2016.

ರಿಜಿಸ್ಟ್ರಾರ್ ಹುದ್ದೆಯ ಉದ್ಯೋಗಿಯನ್ನು ಪದಚ್ಯುತಿಗೊಳಿಸಲು ನಿರ್ದೇಶಿಸಿದ್ದರಿಂದಾಗಿ ಈ ನ್ಯಾಯಾಲಯ ಮಾಡಿದ ಆದೇಶದಿಂದ ಉದ್ಭವಿಸಿದ್ದು, ಕೇವಲ ತಾತ್ಕಾಲಿಕ ಆಧಾರದ ಮೇಲೆ ಆಡ್‌ಹಾಕ್ ಏರ್ಪಾಡು ಮಾಡಿದ್ದು, ದಿನಾಂಕ 20.02.2013ರ ಅಧಿಸೂಚನೆ ಪ್ರಕಾರ ಬೆಂಗಳೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಹುದ್ದೆಯ ಪ್ರಭಾರದಲ್ಲಿ ಅರ್ಜಿದಾರರನ್ನು ನಿಯೋಜಿಸುವ ಮೂಲಕ ನೇಮಕ ಮಾಡಲಾಗಿತ್ತು. ಕೇವಲ ಆಡ್‌ಹಾಕ್ ವ್ಯವಸ್ಥೆಗೆ ಏರ್ಪಾಡು ಮಾಡಿರುವುದರಿಂದ, ಸರ್ವೋಚ್ಚ ನ್ಯಾಯಾಲಯ ವಿಶೇಷ ಅನುಮತಿ ಅರ್ಜಿಯನ್ನು ವಿಲೇ ಮಾಡುವವರೆಗೆ ಅಥವಾ ಅಂಥ ಕ್ರಮಬದ್ಧ ನೇಮಕಾತಿಯ ಸಮಯದವರೆಗೆ ಅಂಥ ಆಡ್‌ಹಾಕ್ ಏರ್ಪಾಡಿನಲ್ಲಿ ಆಕೆಯನ್ನು ಮುಂದುವರೆಸಲು ನಿಹಿತಗೊಳಿಸಿದ ಹಕ್ಕನ್ನು ಅರ್ಜಿದಾರರು ಆ ಹುದ್ದೆಯಲ್ಲಿ ಯಾವುದೇ ಹಕ್ಕನ್ನು ಹೊಂದಿರತಕ್ಕದ್ದಲ್ಲವೆಂಬುದನ್ನು ಒತ್ತಿ ಹೇಳಲಾಗಿದೆಯೆಂಬುದು ವಿವಾದವಾಗಲಾರದು.

ಸರ್ವೋಚ್ಚ ನ್ಯಾಯಾಲಯದಿಂದ ವಿಶೇಷ ಅನುಮತಿ ಅರ್ಜಿಯನ್ನು ಅಂತಿಮವಾಗಿ ವಿಲೇ ಮಾಡುವವರೆಗೆ ಆಕೆಯ ಆಡ್‌ಹಾಕ್ ನೇಮಕಾತಿ ಅವಧಿಯನ್ನು ಮುಂದುವರೆಸತಕ್ಕದ್ದುಯೆಂದು ನೇಮಕಾತಿ ಆದೇಶದಲ್ಲಿ ಸಹ ನಮೂದಿಸಿರುವುದಿಲ್ಲ. ಆಡ್‌ಹಾಕ್ ಮತ್ತು ತಾತ್ಕಾಲಿಕ ಏರ್ಪಾಡು, ವಿಶೇಷ ಅನುಮತಿ ಅರ್ಜಿಯು ವಿಲೇಗೊಳಪಟ್ಟಿದ್ದು ಎಂದು ನೇಮಕಾತಿ ಆದೇಶದಲ್ಲಿ ಒಳಗೊಂಡಿರುವ ಮಾತ್ರಕ್ಕೆ, ವಿಶೇಷ ಅನುಮತಿ ಅರ್ಜಿಯನ್ನು ವಿಲೇ ಮಾಡುವವರೆಗೆ, ಆಕೆಯನ್ನು ಆ ಹುದ್ದೆಯಿಂದ ಸ್ಥಾನಪಲ್ಲಟ ಮಾಡಲಾಗದೆಂದು ಅರ್ಜಿದಾರರು ಅದನ್ನು ಒತ್ತಿ ಹೇಳಲಾಗದು. ಸರ್ವೋಚ್ಚ ನ್ಯಾಯಾಲಯ ಮಾಡಿದ ಮಧ್ಯಕಾಲೀನ ಆದೇಶವು, ಅದು ಮುಂದೆ ಅರ್ಜಿದಾರರ ಸಮಸ್ಯೆಯನ್ನು ಅಂದರೆ ಪ್ರಾಧ್ಯಾಪಕ ಮೈಲಾರಪ್ಪ ರವರ ವಿರುದ್ಧ ಈ ನ್ಯಾಯಾಲಯದಿಂದ ಹೊರಡಿಸಿದ ಕೋವಾರಂಟು ರಿಟ್ ಪರಿಹರಿಸುವವರೆಗೆ, ರಿಜಿಸ್ಟ್ರಾರ್ ಹುದ್ದೆಗೆ, ಕ್ರಮಬದ್ಧ ನೇಮಕಾತಿ ಮಾಡಿಕೊಳ್ಳುವ ಮೂಲಕ ಭರ್ತಿ ಮಾಡಿಕೊಳ್ಳಲಾಗದು, ಆದರೆ, ಆಡ್‌ಹಾಕ್ ಮತ್ತು ತಾತ್ಕಾಲಿಕ ಏರ್ಪಾಡು ಮಾಡುವ ಮೂಲಕ ಮಾತ್ರ ಭರ್ತಿ ಮಾಡಿಕೊಳ್ಳಬಹುದು ಎಂದು ಅಭಿಪ್ರಾಯಪಟ್ಟಿದೆ. ಇದರಲ್ಲಿರುವ ಅರ್ಜಿದಾರರು, ಸರ್ವೋಚ್ಚ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವ ವಿಶೇಷ

**ಅನುಮತಿ ಅರ್ಜಿಯೊಂದಿಗೆ ಸಂಬಂಧಪಡುವುದಿಲ್ಲ, ಆಕೆಯು ಪಕ್ಷಕಾರರಾಗಿರುವುದಿಲ್ಲ. ಆದ್ದರಿಂದ, ಬೆಂಗಳೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಹುದ್ದೆಯ ತಾತ್ಕಾಲಿಕ ಪ್ರಭಾರದಲ್ಲಿ ಅರ್ಜಿದಾರರಾದ ಆಕೆಯನ್ನು ಆಡ್‌ಹಾಕ್‌ನಲ್ಲಿ ರಾಜ್ಯ ಸರ್ಕಾರ ನೇಮಕ ಮಾಡಿರುವಾಗ, ಕ್ರಮಬದ್ಧ ನೇಮಕಾತಿ ಮಾಡುವವರೆಗೆ ಅಥವಾ ವಿಶೇಷ ರಜಾ ಅರ್ಜಿಯ ಅಂತಿಮ ವಿಲೆಯಾಗುವವರೆಗೆ ಆ ಹುದ್ದೆಯಲ್ಲಿ ಆಕೆಯನ್ನು ಮುಂದುವರೆಸಲು ಸರ್ಕಾರ ಉದ್ದೇಶಿಸಿರುವುದಿಲ್ಲ. ಅರ್ಜಿದಾರರು ಮಾಡಿದ ಅಂಥ ಈಗಿನ ಕ್ಲೇಮು, ಸಂಪೂರ್ಣವಾಗಿ ಲೋಪವಾಗಿದೆ ಮತ್ತು ಸಮರ್ಥನೀಯವಲ್ಲದ್ದಾಗಿದೆ ಎಂದು ಅಭಿಪ್ರಾಯಪಟ್ಟು ಪ್ರಸ್ತುತ ರಿಟ್ ಅರ್ಜಿಯನ್ನು ವಜಾಗೊಳಿಸಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು:*** ***ಪ್ಯಾರಾಗಳಲ್ಲಿ***

1. *(2011) 11 ಎಸ್‌ಸಿಸಿ 441*
   *ಉತ್ತರ ಪ್ರದೇಶ ಸರ್ಕಾರ ಮತ್ತು ಇತರರು*
   *–ವಿರುದ್ಧ– ರೇಖಾರಾಣಿ (ಉಲ್ಲೇ) 13*
2. *(1998) 5 ಎಸ್‌ಸಿಸಿ 450*
   *ಪಂಜಾಬ್ ರಾಜ್ಯ ವಿದ್ಯುಚ್ಛಕ್ತಿ ಮಂಡಲಿ*
   *ಮತ್ತು ಇನ್ನೊಬ್ಬರು –ವಿರುದ್ಧ– ಬಲದೇವ್ ಸಿಂಗ್ (ಉಲ್ಲೇ) 14*

ಅಪೀಲುದಾರರ ಪರ : ಶ್ರೀ ಕೆ.ಸಿ. ಶಾಂತಕುಮಾರ್, ವಕೀಲರು ಪರವಾಗಿ,
ಶ್ರೀ ಹೆಚ್. ಸುಬ್ರಮಣ್ಯ ಜೋಯಿಸ್ –
ಹಿರಿಯ ನ್ಯಾಯವಾದಿಗಳು.

ಪ್ರತ್ಯಪೀಲುದಾರರ ಪರ : 1ನೇ ಪ್ರತ್ಯರ್ಜಿದಾರರ ಪರವಾಗಿ – ಶ್ರೀ ಡಿ. ಅಶ್ವತ್ಥಪ್ಪ,
ಎಜಿಎ – ಪರವಾಗಿ – ಶ್ರೀ ಆದಿತ್ಯ ಸೋಂದಿ –
ಅಡಿಷನಲ್ ಅಡ್ವೋಕೇಟ್ ಜನರಲ್.
2ನೇ ಪ್ರತ್ಯರ್ಜಿದಾರರ ಪರ
ಶ್ರೀ ಟಿ.ಪಿ. ರಾಜೇಂದ್ರಕುಮಾರ್ ಸುಂಗೆ, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಬಿ.ಎಸ್. ಪಾಟೀಲ್:**

ಅರ್ಜಿದಾರರನ್ನು ಬೆಂಗಳೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್‌ರಾಗಿ ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ನಿಯೋಜನೆ ಮಾಡಿದ ಆಡ್‌ಹಾಕ್ ಪ್ರಭಾರದ ಏರ್ಪಾಡನ್ನು ಅನುಬಂಧ–ಎ ಯಲ್ಲಿರುವ ಉನ್ನತ ಶಿಕ್ಷಣ ಇಲಾಖೆ ಮೂಲಕ ರಾಜ್ಯ ಸರ್ಕಾರದಿಂದ ಹೊರಡಿಸಿದ ಅಧಿಸೂಚನೆ ದಿನಾಂಕ 04.04.2013ರ ಮೂಲಕ ಹಿಂತೆಗೆದುಕೊಳ್ಳಲಾದ ಪ್ರಶ್ನಿತ ಅಧಿಸೂಚನೆಯನ್ನು ಅರ್ಜಿದಾರರು ಈ ರಿಟ್ ಅರ್ಜಿಯಲ್ಲಿ ಪ್ರಶ್ನಿಸಿದ್ದಾರೆ.

2. ಈ ರಿಟ್ ಅರ್ಜಿಗೆ ಪ್ರಮುಖವಾದ ಸಂಗತಿಗಳು, ಅರ್ಜಿದಾರರು, ಬೆಂಗಳೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾಗಿದ್ದಾರೆ ಎಂಬುದನ್ನು ಸಂಕ್ಷಿಪ್ತವಾಗಿ ನಿರೂಪಿಸಿ ಹೇಳಲಾಗಿದೆ. ರಿಜಿಸ್ಟ್ರಾರ್ ಹುದ್ದೆಯಂತೆ, ಖಾಲಿ ಸ್ಥಾನಕ್ಕೆ, ಅರ್ಜಿದಾರರನ್ನು, ಆಡ್‌ಹಾಕ್ ಮತ್ತು ತಾತ್ಕಾಲಿಕ ಏರ್ಪಾಡು ಮೂಲಕ ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ದಿನಾಂಕ 20.02.2013 ರಂದು ನಿಯೋಜಿಸಲಾಗಿತ್ತು. ವಾಸ್ತವವಾಗಿ, ಪ್ರಾಧ್ಯಾಪಕ ಬಿ.ಸಿ. ಮೈಲಾರಪ್ಪರವರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 (ಸಂಕ್ಷಿಪ್ತವಾಗಿ ಅಧಿನಿಯಮ) 17ನೇ ಪ್ರಕರಣದ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್‌ರಾಗಿ ನೇಮಕ ಮಾಡಲಾಗಿತ್ತು. ಈ ನೇಮಕಾತಿಯನ್ನು, ಕೋವಾರಂಟು ರಿಟ್ ಕೋರುವ ಮೂಲಕ ರಿಟ್ ಅಪೀಲು ಸಂ.4340/2012 ರಲ್ಲಿರುವಂತೆ ಪ್ರಶ್ನಿಸಲಾಗಿತ್ತು. ಈ ನ್ಯಾಯಾಲಯದ ವಿಭಾಗೀಯ ಪೀಠವು, ದಿನಾಂಕ 21.11.2012 ರಂದು ಸದರಿ ರಿಟ್ ಅರ್ಜಿಯನ್ನು ಅಂಗೀಕರಿಸಿತ್ತು ಮತ್ತು ಕೂಡಲೇ ಪರಿಣಾಮಕಾರಿಯಾಗಿ ಆ ಹುದ್ದೆಯಿಂದ ಅವರನ್ನು ಪದಚ್ಯುತಿಗೊಳಿಸುವಂತೆ ಕೋವಾರಂಟು ರಿಟ್‌ನ್ನು ಹೊರಡಿಸಿತ್ತು. ಅನುಮತಿ ಅರ್ಜಿಯನ್ನು ಎಸ್‌ಎಲ್‌ಪಿ (ಸಿವಿಲ್) ಸಂ.450/2013ರಲ್ಲಿ ಸರ್ವೋಚ್ಚ ನ್ಯಾಯಾಲಯದ

ಮುಂದೆ ದಾಖಲು ಮಾಡಿದ್ದಾರೆ. ಸರ್ವೋಚ್ಚ ನ್ಯಾಯಾಲಯವು, ರಿಜಿಸ್ಟ್ರಾರ್ ಹುದ್ದೆಗೆ ಮಾಡಬಹುದಾದ ಯಾವುದೇ ನೇಮಕಾತಿಯು, ಆಡ್‌ಹಾಕ್ ಏರ್ಪಾಡು ಮಾಡುವ ರೀತಿಯಲ್ಲಿ ಮಾತ್ರವಾಗಿದೆ ಎಂಬುದನ್ನು ಸ್ಪಷ್ಟೀಕರಿಸಿ ಮಾಡಲಾಗಿದ್ದು, ದಿನಾಂಕ 10.01.2013 ರಂದು ಮಧ್ಯಕಾಲೀನ ಆದೇಶ ನೀಡಿತು. ಈ ಹಿನ್ನೆಲೆಯಲ್ಲಿ, ದಿನಾಂಕ 20.02.2013ರ ಅಧಿಸೂಚನೆ ಹೊರಡಿಸುವ ಮೂಲಕ, ಅರ್ಜಿದಾರರನ್ನು, ಕೇವಲ ಆಡ್‌ಹಾಕ್‌ನಂತೆ ಏರ್ಪಾಡು ಮಾಡಿ ರಿಜಿಸ್ಟ್ರಾರ್ ಹುದ್ದೆಯ ಪ್ರಭಾರದಲ್ಲಿರಿಸಲಾಗಿತ್ತು. ಈ ನೇಮಕಾತಿಯು, ಸರ್ವೋಚ್ಚ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವ ವಿಶೇಷ ಅನುಮತಿ ಅರ್ಜಿಯ ತೀರ್ಮಾನಕ್ಕೊಳ್ಳಪಟ್ಟ ನೇಮಕಾತಿಯಾಗಿದೆ ಎಂಬುದನ್ನು ಸಹ ಸ್ಪಷ್ಟವಾಗಿ ಹೇಳಲಾಗಿತ್ತು.

3. ಪ್ರಾಧ್ಯಾಪಕ, ಆರ್.ಕೆ. ಸೋಮಶೇಖರ್, ರಿಜಿಸ್ಟ್ರಾರ್ (ಮೌಲ್ಯಮಾಪನ), ಎಂಬುವವರು, ದಿನಾಂಕ 20.02.2013ರ ಅಧಿಸೂಚನೆ ಪ್ರಕಾರ ಅರ್ಜಿದಾರರ ನೇಮಕಾತಿಯನ್ನು ಟೀಕಿಸಿ ರಿಟ್ ಅಪೀಲು ಸಂ.9347/2013ನ್ನು ದಾಖಲು ಮಾಡಿದ್ದಾರೆ ಎಂಬುದನ್ನು ಸಹಾ ಈ ಹಂತದಲ್ಲಿ ಗಮನಿಸಬೇಕಾದುದು ಪ್ರಸಕ್ತವಾಗಿದೆ. ಸದರಿ ರಿಟ್ ಅರ್ಜಿಯಲ್ಲಿ, ಅರ್ಜಿದಾರರ ನೇಮಕಾತಿಯನ್ನು ಸರ್ಕಾರ ಸಮರ್ಥಿಸಿಕೊಂಡಿತ್ತು. ತರುವಾಯ, ಪ್ರಾಧ್ಯಾಪಕ ಆರ್.ಕೆ. ಸೋಮಶೇಖರ್, 27.03.2013 ರಂದು ರಿಟ್ ಅರ್ಜಿಯನ್ನು ಹಿಂತೆಗೆದುಕೊಂಡಿದ್ದರು.

4. ಪ್ರಸ್ತುತ ರಿಟ್ ಅರ್ಜಿಯಲ್ಲಿ ಯಾವುದೇ ಕಾರಣಗಳನ್ನು ನೀಡದೇ ರಾಜ್ಯ ಸರ್ಕಾರ ರಿಜಿಸ್ಟ್ರಾರ್ ಹುದ್ದೆಯ ಪ್ರಭಾರದಲ್ಲಿ ಆಕೆಯನ್ನು ನಿಯೋಜನೆ ಮಾಡಿದ್ದ ಅರ್ಜಿದಾರರ ನೇಮಕಾತಿಯ ಆಡ್‌ಹಾಕ್ ಏರ್ಪಾಡನ್ನು ಹಿಂತೆಗೆದುಕೊಂಡು ಪ್ರಶ್ನಿತ ಅಧಿಸೂಚನೆಯನ್ನು ಹೊರಡಿಸಲಾಗಿದೆಯೆಂದು ಅರ್ಜಿದಾರರು ವಾದಿಸಿದ್ದಾರೆ.

5. ಪ್ರಶ್ನಿತ ಅಧಿಸೂಚನೆಯು, ಎಸ್‌ಎಲ್‌ಪಿ ಸಂ.450/2013 ರಲ್ಲಿ ಸರ್ವೋಚ್ಚ ನ್ಯಾಯಾಲಯ ಮಾಡಿದ ಮಧ್ಯಕಾಲೀನ ಆದೇಶ ದಿನಾಂಕ 10.01.2013ಕ್ಕೆ ವಿರುದ್ಧವಾಗಿದೆ ಮತ್ತು ಈ ಅಧಿನಿಯಮದ 17ನೇ ಪ್ರಕರಣಕ್ಕೂ ಸಹ

ವಿರೋಧವಾಗಿದೆಯೆಂದು ಮಾನ್ಯ ಹಿರಿಯ ನ್ಯಾಯವಾದಿಯಾದ ಶ್ರೀ ಸುಬ್ರಮಣ್ಯ ಜೋಯಿಸ್‌ರವರು ವಾದಿಸಿದ್ದಾರೆ. ತನ್ನ ವಾದಕ್ಕೆ ಪೂರಕವಾಗಿ ಅವರು, ಈ ಮುಂದಿನ ತೀರ್ಮಾನಗಳನ್ನು ಅವಲಂಬಿಸಿದ್ದಾರೆ:

1. **(2012) 4 ಎಸ್‌ಸಿಸಿ 407–ರವಿ ಯಶವಂತ್ ಬೋಹಿರ್ –ವಿರುದ್ಧ– ಡಿಸ್ಟ್ರಿಕ್ಟ್ ಕಲೆಕ್ಟರ್, ರಾಯಗಡ್ ಮತ್ತು ಇತರರು.**

2. **(2013) 6 ಎಸ್‌ಸಿಸಿ 770 – ಅಂಕುಶ್ ಶಿವಾಜಿ ಗಾಯಕ್‌ವಾಡ್ –ವಿರುದ್ಧ– ಮಹಾರಾಷ್ಟ್ರ ಸರ್ಕಾರ.**

3. **ಎಐಆರ್ 1970 ಎಸ್‌ಸಿ 150 – ಎ.ಕೆ. ಕ್ರೈಪಾಕ್ ಮತ್ತು ಇತರರು –ವಿರುದ್ಧ– ಭಾರತ ಸರ್ಕಾರ ಮತ್ತು ಇತರರು.**

4. **ಎಐಆರ್ 1967 ಎಸ್‌ಸಿ 1427 – ಎಸ್.ಜಿ. ಜೈಸಿಂಗಾನಿ –ವಿರುದ್ಧ– ಭಾರತ ಸರ್ಕಾರ ಮತ್ತು ಇತರರು.**

6. ಮಾನ್ಯ ಅಡಿಷನಲ್ ಅಡ್ವೋಕೇಟ್ ಜನರಲ್ ಶ್ರೀ ಆದಿತ್ಯ ಸೋಂದಿಯವರು, ಪ್ರಶ್ನಿತ ಅಧಿಸೂಚನೆಯನ್ನು ಬಲವಾಗಿ ಸಮರ್ಥಿಸಿಕೊಂಡಿದ್ದಾರೆ ಮತ್ತು ಅರ್ಜಿದಾರರಾದ, ಆಕೆಯ ನೇಮಕಾತಿಯನ್ನು, ಕೇವಲ ಆಡ್‌ಹಾಕ್ ಏರ್ಪಾಡು ಆಗಿದ್ದು, ಈ ನ್ಯಾಯಾಲಯದಿಂದ ಪಡೆದುಕೊಂಡ ಮಧ್ಯಕಾಲೀನ ಆದೇಶದ ಕಾರಣದಿಂದ ರಿಜಿಸ್ಟ್ರಾರ್ ಹುದ್ದೆಯಲ್ಲಿ ಮುಂದುವರೆದಿರುತ್ತಾರೆಂದು ವಾದಿಸಿದ್ದಾರೆ. ರಾಜ್ಯ ಸರ್ಕಾರ, ಗರಿಷ್ಠ ಕಾಲಿಕ ಶ್ರೇಣಿ ಹುದ್ದೆಯ ಸಮೂಹ–ಎ ಅಧಿಕಾರಿ ದರ್ಜೆಗಿಂತ ಕೆಳಗಿರದ ಅಧಿಕಾರಿಯನ್ನು ಅಥವಾ ಕನಿಷ್ಠ ಪಕ್ಷ ಐದು ವರ್ಷಗಳು

ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ವಿಶ್ವವಿದ್ಯಾಲಯದ ಯಾವುದೇ ವಿಭಾಗದ ಸದಸ್ಯನನ್ನು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಆಗಿ ನೇಮಕಾತಿ ಮಾಡುವ ಅಧಿಕಾರವನ್ನು ಹೊಂದಿರುತ್ತದೆ ಮತ್ತು ಅರ್ಜಿದಾರರು, ಖಾಯಂ ಪ್ರಾಧ್ಯಾಪಕ ಹುದ್ದೆಯನ್ನು ಹೊಂದಿದ್ದು, ಅವರನ್ನು ಕೇವಲ ತಾತ್ಕಾಲಿಕ ಮತ್ತು ಆಡ್‌ಹಾಕ್ ಆಧಾರದ ಮೇಲೆ ರಿಜಿಸ್ಟ್ರಾರ್ ಹುದ್ದೆಯ ಪ್ರಭಾರದಲ್ಲಿ ನಿಯೋಜಿಸಲಾಗಿತ್ತು. ಆದ್ದರಿಂದ, ಅರ್ಜಿದಾರರು, ಆ ಹುದ್ದೆಯಲ್ಲಿ ಮುಂದುವರೆಯುವ ಹಕ್ಕನ್ನು ಹೊಂದಿರುವುದಿಲ್ಲ ಮತ್ತು ಸದರಿ ಆದೇಶವನ್ನು ಪ್ರಶ್ನಿಸಿ ದಾಖಲು ಮಾಡಿದ ರಿಟ್ ಅರ್ಜಿಯು, ಲೋಪವಾಗಿದೆಯೆಂದು ವಾದಿಸುತ್ತಾ ಈ ಅಧಿನಿಯಮದ 17(1)ನೇ ಪ್ರಕರಣದತ್ತ ಈ ನ್ಯಾಯಾಲಯದ ಗಮನ ಸೆಳೆದಿದ್ದಾರೆ. ಹಾಗೇ ಆಡ್‌ಹಾಕ್ ಮೇಲೆ ಏರ್ಪಾಡು ಮಾಡಿದ್ದನ್ನು ರದ್ದುಗೊಳಿಸುವ ಅಥವಾ ಹಿಂತೆಗೆದುಕೊಳ್ಳುವ ಮುಂಚೆ ಅರ್ಜಿದಾರರನ್ನು ಸುನಾವಣೆ ಮಾಡುವ ಪ್ರಶ್ನೆಯು ಪ್ರಶ್ನಿಸಿದ್ದು, ಸಂಪೂರ್ಣವಾಗಿ ಅನಗತ್ಯವಾಗಿದೆಯೆಂದು ಅವರು ವಾದಿಸಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ, ಆತನು, ಸರ್ವೋಚ್ಚ ನ್ಯಾಯಾಲಯದ ಈ ಮುಂದಿನ ತೀರ್ಮಾನಗಳ ಮೇಲೆ ಅವಲಂಬಿತನಾಗಿದ್ದಾನೆ:

1. **(1998) 5 ಎಸ್‌ಸಿಸಿ 450 – ಪಂಜಾಬ್ ರಾಜ್ಯ ವಿದ್ಯುಚ್ಛಕ್ತಿ ಮಂಡಳಿ ಮತ್ತು ಬೇರೊಬ್ಬರು -ವಿರುದ್ಧ- ಬಲದೇವ್ ಸಿಂಗ್.**

2. **(2011) ಎಸ್‌ಸಿಸಿ 441 – ಉತ್ತರ ಪ್ರದೇಶ ಸರ್ಕಾರ ಮತ್ತು ಇತರರು -ವಿರುದ್ಧ- ರೇಖಾರಾಣಿ.**

7. ಎಲ್ಲಾ ಪಕ್ಷಕಾರರ ಪರವಾಗಿ ಮಾನ್ಯ ನ್ಯಾಯವಾದಿಗಳ ಅಹವಾಲನ್ನು ಆಲಿಸಲಾಗಿದ್ದು, ಪರಿಗಣನೆಗಾಗಿ ಉದ್ಭವಿಸುವ ಏಕೈಕ ಪ್ರಶ್ನೆ ಏನೆಂದರೆ, ರಿಟ್ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ಹಸ್ತಕ್ಷೇಪ ಮಾಡುವುದಕ್ಕೆ ಯಾವುದೇ ಕಾನೂನು ಬಾಹಿರತೆಯನ್ನೊಳಗೊಂಡಿದೆಯೇ? ಎಂಬುದಾಗಿದೆ.

8. ಅರ್ಜಿದಾರರು, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆಂಬುದರಲ್ಲಿ ಯಾವುದೇ ವಿವಾದವಿಲ್ಲ. ಆಕೆಯು, ಸದರಿ ಹುದ್ದೆಯನ್ನು ಹೊಂದುವಾಗ, ಸಾದಿಲ್ವಾರು ವರದಿ ಮೇಲೆ, ಕೋವಾರಂಟು ರಿಟ್‌ನ್ನು ಹೊರಡಿಸಿದ್ದರಿಂದಾಗಿ ಬೆಂಗಳೂರು ವಿಶ್ವವಿದ್ಯಾಲಯ ರಿಜಿಸ್ಟ್ರಾರ್ ಹುದ್ದೆಯ ಉದ್ಯೋಗಿಯನ್ನು ಪದಚ್ಯುತಿಗೊಳಿಸಲು ನಿರ್ದೇಶಿಸಿದ್ದರಿಂದಾಗಿ ಈ ನ್ಯಾಯಾಲಯ ಮಾಡಿದ ಆದೇಶದಿಂದ ಉದ್ಭವಿಸಿದ್ದು, ಕೇವಲ ತಾತ್ಕಾಲಿಕ ಆಧಾರದ ಮೇಲೆ ಆಡ್‌ಹಾಕ್ ಏರ್ಪಾಡು ಮಾಡಿದ್ದು, ದಿನಾಂಕ 20.02.2013ರ ಅಧಿಸೂಚನೆ ಪ್ರಕಾರ ಬೆಂಗಳೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಹುದ್ದೆಯ ಪ್ರಭಾರದಲ್ಲಿ ಅರ್ಜಿದಾರರನ್ನು ನಿಯೋಜಿಸುವ ಮೂಲಕ ನೇಮಕ ಮಾಡಲಾಗಿತ್ತು. ಕೇವಲ ಆಡ್‌ಹಾಕ್ ವ್ಯವಸ್ಥೆಗೆ ಏರ್ಪಾಡು ಮಾಡಿರುವುದರಿಂದ, ಸರ್ವೋಚ್ಚ ನ್ಯಾಯಾಲಯ ವಿಶೇಷ ಅನುಮತಿ ಅರ್ಜಿಯನ್ನು ವಿಲೇ ಮಾಡುವವರೆಗೆ ಅಥವಾ ಅಂಥ ಕ್ರಮಬದ್ಧ ನೇಮಕಾತಿಯ ಸಮಯದವರೆಗೆ ಅಂಥ ಆಡ್‌ಹಾಕ್ ಏರ್ಪಾಡಿನಲ್ಲಿ ಆಕೆಯನ್ನು ಮುಂದುವರೆಸಲು ನಿಹಿತಗೊಳಿಸಿದ ಹಕ್ಕನ್ನು ಅರ್ಜಿದಾರರು ಆ ಹುದ್ದೆಯಲ್ಲಿ ಯಾವುದೇ ಹಕ್ಕನ್ನು ಹೊಂದಿರತಕ್ಕದ್ದಲ್ಲವೆಂಬುದನ್ನು ಒತ್ತಿ ಹೇಳಲಾಗಿದೆಯೆಂಬುದು ವಿವಾದವಾಗಲಾರದು.

9. ಸರ್ವೋಚ್ಚ ನ್ಯಾಯಾಲಯದಿಂದ ವಿಶೇಷ ಅನುಮತಿ ಅರ್ಜಿಯನ್ನು ಅಂತಿಮವಾಗಿ ವಿಲೇ ಮಾಡುವವರೆಗೆ ಆಕೆಯ ಆಡ್‌ಹಾಕ್ ನೇಮಕಾತಿ ಅವಧಿಯನ್ನು ಮುಂದುವರೆಸತಕ್ಕದ್ದುಯೆಂದು ನೇಮಕಾತಿ ಆದೇಶದಲ್ಲಿ ಸಹ ನಮೂದಿಸಿರುವುದಿಲ್ಲ. ಆಡ್‌ಹಾಕ್ ಮತ್ತು ತಾತ್ಕಾಲಿಕ ಏರ್ಪಾಡು, ವಿಶೇಷ ಅನುಮತಿ ಅರ್ಜಿಯ ವಿಲೇಗೊಳಪಟ್ಟಿದ್ದು ಎಂದು ನೇಮಕಾತಿ ಆದೇಶದಲ್ಲಿ ಒಳಗೊಂಡಿರುವ ಮಾತ್ರಕ್ಕೆ, ವಿಶೇಷ ಅನುಮತಿ ಅರ್ಜಿಯನ್ನು ವಿಲೇ ಮಾಡುವವರೆಗೆ, ಆಕೆಯನ್ನು ಆ ಹುದ್ದೆಯಿಂದ ಸ್ಥಾನಪಲ್ಲಟ ಮಾಡಲಾಗದೆಂದು ಅರ್ಜಿದಾರರು ಅದನ್ನು ಒತ್ತಿ ಹೇಳಲಾಗದು. ಸರ್ವೋಚ್ಚ ನ್ಯಾಯಾಲಯ ಮಾಡಿದ ಮಧ್ಯಕಾಲೀನ ಆದೇಶವು, ಅದು ಮುಂದೆ ಅರ್ಜಿದಾರರ ಸಮಸ್ಯೆಯನ್ನು ಅಂದರೆ ಪ್ರಾಧ್ಯಾಪಕ ಮೈಲಾರಪ್ಪ ರವರ ವಿರುದ್ಧ ಈ ನ್ಯಾಯಾಲಯದಿಂದ ಹೊರಡಿಸಿದ ಕೋವಾರಂಟು ರಿಟ್

ಪರಿಹರಿಸುವವರೆಗೆ, ರಿಜಿಸ್ಟ್ರಾರ್ ಹುದ್ದೆಗೆ, ಕ್ರಮಬದ್ಧ ನೇಮಕಾತಿ ಮಾಡಿಕೊಳ್ಳುವ ಮೂಲಕ ಭರ್ತಿ ಮಾಡಿಕೊಳ್ಳಲಾಗದು, ಆದರೆ, ಆಡ್‌ಹಾಕ್ ಮತ್ತು ತಾತ್ಕಾಲಿಕ ಏರ್ಪಾಡು ಮಾಡುವ ಮೂಲಕ ಮಾತ್ರ ಭರ್ತಿ ಮಾಡಿಕೊಳ್ಳಬಹುದು ಎಂದು ಅಭಿಪ್ರಾಯಪಟ್ಟಿದೆ. ಇದರಲ್ಲಿರುವ ಅರ್ಜಿದಾರರು, ಸರ್ವೋಚ್ಚ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವ ವಿಶೇಷ ಅನುಮತಿ ಅರ್ಜಿಯೊಂದಿಗೆ ಸಂಬಂಧಪಡುವುದಿಲ್ಲ, ಆಕೆಯು ಪಕ್ಷಕಾರರಾಗಿರುವುದಿಲ್ಲ. ಆದ್ದರಿಂದ, ಬೆಂಗಳೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಹುದ್ದೆಯ ತಾತ್ಕಾಲಿಕ ಪ್ರಭಾರದಲ್ಲಿ ಅರ್ಜಿದಾರರಾದ ಆಕೆಯನ್ನು ಆಡ್‌ಹಾಕ್‌ನಲ್ಲಿ ರಾಜ್ಯ ಸರ್ಕಾರ ನೇಮಕ ಮಾಡಿರುವಾಗ, ಕ್ರಮಬದ್ಧ ನೇಮಕಾತಿ ಮಾಡುವವರೆಗೆ ಅಥವಾ ವಿಶೇಷ ರಜಾ ಅರ್ಜಿಯ ಅಂತಿಮ ವಿಲೆಯಾಗುವವರೆಗೆ ಆ ಹುದ್ದೆಯಲ್ಲಿ ಆಕೆಯನ್ನು, ಮುಂದುವರೆಸಲು ಸರ್ಕಾರ ಉದ್ದೇಶಿಸಿರುವುದಿಲ್ಲ. ಅರ್ಜಿದಾರರು ಮಾಡಿದ ಅಂಥ ಈಗಿನ ಕ್ಲೇಮು, ಸಂಪೂರ್ಣವಾಗಿ ಲೋಪವಾಗಿದೆ ಮತ್ತು ಸಮರ್ಥನೀಯವಲ್ಲದಾಗಿದೆ.

10. ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಯು ಅವಲಂಬಿಸಿರುವ ತೀರ್ಮಾನಗಳು, ಬೆಂಗಳೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಹುದ್ದೆಯ ಪ್ರಭಾರದಲ್ಲಿ ಅರ್ಜಿದಾರರನ್ನು ನಿಯೋಜಿಸುವ ಮೂಲಕ ಮಾಡಿದ ಆಡ್‌ಹಾಕ್ ಮತ್ತು ತಾತ್ಕಾಲಿಕ ಏರ್ಪಾಡನ್ನು ಹಿಂತೆಗೆದುಕೊಂಡ ಪ್ರಶ್ನಿತ ಅಧಿಸೂಚನೆಯಲ್ಲಿರುವ ಕಾರಣಗಳ ಕೊರತೆಗೆ ಸಂಬಂಧಪಟ್ಟಂತೆ ಪ್ರಸ್ತುತ ಪ್ರಕರಣದ ಸಂಗತಿಗಳಿಗೆ ಅನ್ವಯಿಸುವುದಿಲ್ಲ. ಮೇಲೆ ಉಲ್ಲೇಖಿಸಲಾದ ***ರವಿ ಯಶವಂತ್ ಬೊಯರ್*** ಪ್ರಕರಣದಲ್ಲಿ, ಸರ್ವೋಚ್ಚ ನ್ಯಾಯಾಲಯ ಅನೌಪಚಾರಿಕವಾಗಿ ಕಾನೂನಿನಲ್ಲಿ ಉಪಬಂಧಿಸಿರುವಂತೆ ಸರಿಯಾಗಿ ನಡೆದುಕೊಳ್ಳಲಾರದ ಸಾಂದರ್ಭಿಕ ರೀತಿಯಲ್ಲಿ ಮುನ್ಸಿಪಲ್ ಕೌನ್ಸಿಲ್ ಕ್ರಮಬದ್ಧ ಚುನಾಯಿತ ಅಧ್ಯಕ್ಷರನ್ನು ತೆಗೆದು ಹಾಕಿದ ವಿವಾದಾಂಶದೊಂದಿಗೆ ವ್ಯವಹರಿಸಲಾಗಿದೆ. ಆ ಅರ್ಥದಲ್ಲಿ ಸರ್ವೋಚ್ಚ ನ್ಯಾಯಾಲಯ, ಆಡಳಿತ ವಿಷಯಗಳಲ್ಲಿಯೂ ಸಹ, ಸಕಾರಣ ಆದೇಶವನ್ನು ಮಾಡಿದ ಪ್ರಾಧಿಕಾರಗಳ ಮೇಲೆ ಅಧಿಕಾರದಲ್ಲಿರುವಂತೆ ಕಾರಣಗಳನ್ನು ದಾಖಲಿಸತಕ್ಕದ್ದುವೆಂಬ ಕಾನೂನು ಪ್ರತಿಪಾದನೆಯು

ಸುಸ್ಥಾಪಿತವಾಗಿದೆಯೆಂದು ಅಭಿಪ್ರಾಯಪಟ್ಟಿದೆ. ನೀಡಿದ ಕಾರಣಗಳ ಆಧಾರ ಭೂತ ಉದ್ದೇಶ ಮತ್ತು ಸ್ವಭಾವ ಸಿದ್ಧ ನ್ಯಾಯದ ತತ್ವಗಳ ಪಾಲನೆಯು, ನ್ಯಾಯದ ಲೋಪ ತಡೆಯುವ ಮತ್ತು ಕಾರ್ಯದಲ್ಲಿ ಪ್ರಾಮಾಣಿಕತೆಯನ್ನು ಉಳಿಸಿಕೊಳ್ಳುವ ಗುರಿಯಾಗಿರುತ್ತದೆಂಬುದನ್ನು ಒತ್ತಿ ಹೇಳಲಾಗಿದೆ.

11. ಅರ್ಜಿದಾರರ ವಿರುದ್ಧ ನಿರ್ದೇಶಿಸಲಾದ ಪ್ರಸ್ತುತ ಪ್ರಕರಣದಲ್ಲಿ ನ್ಯಾಯದ ಲೋಪ ಅಥವಾ ಅನ್ಯಾಯ ಅಥವಾ ನಿರಂಕುಶ ಕ್ರಮವಾಗಿರದೇ, ಆಕೆಯು ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ ಆಕೆಯು ಮೂಲ ಹುದ್ದೆಯಲ್ಲಿ ಮುಂದುವರೆಯಲು ತೊಂದರೆ ಅಥವಾ ಯಾವುದೇ ರೀತಿಯಲ್ಲಿ ಪ್ರತಿಕೂಲವಾಗುವುದಿಲ್ಲ. ರಾಜ್ಯ ಸರ್ಕಾರವು, ಕಾನೂನಿನ ಅನುಸಾರವಾಗಿ ರಿಜಿಸ್ಟ್ರಾರ್ ಹುದ್ದೆಗಾಗಿ ಯಾರನ್ನೇ ನೇಮಕಾತಿ ಮಾಡುವ ಸ್ವಾತಂತ್ರ್ಯವಿದ್ದು, ಮರುಕ್ಷಣವೇ ಅರ್ಜಿದಾರರನ್ನು ಅಪ್ರಜ್ಞಾನ ಪೂರ್ವಕವಾಗಿ ಆಕೆಯನ್ನು ಮೂಲ ಹುದ್ದೆಯಲ್ಲಿ ಮುಂದುವರೆಸಿದ್ದು, ಆಡ್‌ಹಾಕ್ ನೇಮಕಾತಿಯಲ್ಲಿ ಮುಂದುವರೆಸುವ ಹಕ್ಕನ್ನು ನಿಹಿತಗೊಳಿಸಲಾಗದು.

12. ಹಾಗೆಯೇ, ಅರ್ಜಿದಾರರ ಪರವಾಗಿ ಮಾನ್ಯ ಹಿರಿಯ ನ್ಯಾಯವಾದಿಯು ಹೇಳಲಾದ ಇತರೇ ತೀರ್ಮಾನಗಳು, ಪ್ರಸ್ತುತ ಪ್ರಕರಣದ ಸಂಗತಿಗಳಿಗೆ ಅನ್ವಯಿಸದೇ, ಪ್ರಸ್ತುತ ಪ್ರಕರಣದ ಅರ್ಜಿಯು, ಕಾನೂನು ಪ್ರತಿಪಾದನೆಯಾಗದಷ್ಟರ ಮಟ್ಟಿಗೆ, ಆ ವ್ಯಕ್ತಿಯು ಅದರಡಿಯಲ್ಲಿ ತಾತ್ಕಾಲಿಕ ಏರ್ಪಾಡು ಅಥವಾ ಆಡ್‌ಹಾಕ್ ಮುಂಚೆಯೂ ಸಹ, ಹುದ್ದೆಯ ಹೆಚ್ಚುವರಿ ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ಕೇಳಲಾಗಿದ್ದು, ವ್ಯತ್ಯಾಸ ಅಥವಾ ರದ್ದುಪಡಿಸಬಹುದು, ಆತನನ್ನು ಸುನಾವಣಿ ಮಾಡಬಹುದು. ಅನ್ಯಥಾ, ಸ್ವಭಾವ ಸಿದ್ಧ ನ್ಯಾಯದ ನಿಯಮಗಳನ್ನು ಉಲ್ಲಂಘಿಸಿದ ಅಥವಾ ಸರ್ಕಾರದ ಕಡೆಯಿಂದ ಅನ್ಯಾಯ ಮತ್ತು ನಿರಂಕುಶ ಕ್ರಮಗಳ ಪರಿಣಾಮ ಅದಕ್ಕೆ ಸಮನಾಗಿರುತ್ತದೆ. ಹಾಗೆಯೇ ಅರ್ಜಿದಾರರಿಂದ ಮುಂದಿಟ್ಟ ವಾದವು ಪೂರ್ಣವಾಗಿ ಲೋಪವಾಗಿದೆ ಮತ್ತು ಸಮರ್ಥಿಸಲಾಗದು.

13. ಇದಕ್ಕೆ ವಿರುದ್ಧವಾಗಿ, ಮಾನ್ಯ ಹೆಚ್ಚುವರಿ ಅಡ್ವೋಕೇಟ್ ಜನರಲ್‌ರವರು ***ಉತ್ತರ ಪ್ರದೇಶ ಸರ್ಕಾರ ಮತ್ತು ಇತರರು –ವಿರುದ್ಧ– ರೇಖಾರಾಣಿ*** [1] ಪ್ರಕರಣದಲ್ಲಿ ಅವಲಂಬಿಸಿದ್ದು, ಪ್ಯಾರಾ 13ರಲ್ಲಿ ಸ್ಪಷ್ಟವಾಗಿ ನಿರೂಪಿಸಿರುವುದು ಈ ಮುಂದಿನಂತಿದೆ:

> "ತಾತ್ಕಾಲಿಕ ನೌಕರನು, ಯು.ಪಿ. ಸರ್ಕಾರ –ವಿರುದ್ಧ– ಕುಶಾಲ್ ಕಿಶೋರ್ ಶುಕ್ಲಾ (1991) 1 ಎಸ್‌ಸಿಸಿ 691 ನೋಡಿದಾಗ ಆ ಹುದ್ದೆಯ ಹಕ್ಕನ್ನು ಹೊಂದಿರುವುದಿಲ್ಲವೆಂಬುದು ಸುಸ್ಥಾಪಿತವಾಗಿದೆ. ಪ್ರತ್ಯರ್ಜಿದಾರರ ಸೇವೆಯನ್ನು ಶಿಕ್ಷೆಯ ಕ್ರಮದಂತೆ ಕೊನೆಗೊಳಿಸಿರುವುದಿಲ್ಲ. ಹಾಗಾಗಿ, ಅಹವಾಲನ್ನು ಹೇಳಿಕೊಳ್ಳುವ ಅಗತ್ಯವಿಲ್ಲದೇ ಇರುವುದರಿಂದ, ಆಕೆಯ ಸೇವೆಯನ್ನು ಕೊನೆಗೊಳಿಸುವುದು ಅಗತ್ಯವಾಗಿದೆ. ಆಕೆ ತಾತ್ಕಾಲಿಕ ನೌಕರರು ಮಾತ್ರವಾಗಿರುವುದರಿಂದ ಆಕೆಯನ್ನು ಪೂರ್ವ ಪದವಿಯಲ್ಲಿರಿಸುವ ನಿರ್ದೇಶನವನ್ನು ಸಮರ್ಥಿಸಿಕೊಳ್ಳಲಾಗದು, ಹಾಗಾಗಿ, ಆ ಹುದ್ದೆಯ ಹಕ್ಕನ್ನು ಹೊಂದಿರುವುದಿಲ್ಲ.

14. ಹಾಗೆಯೇ ***ಪಂಜಾಬ್ ರಾಜ್ಯ ವಿದ್ಯುಚ್ಛಕ್ತಿ ಮಂಡಲಿ ಮತ್ತು ಇನ್ನೊಬ್ಬರು –ವಿರುದ್ಧ– ಬಲದೇವ್ ಸಿಂಗ್*** [2] ಪ್ರಕರಣದಲ್ಲಿನ ತೀರ್ಪು ಸಹ, ಅದರಲ್ಲಿ ಸಂಬಂಧಪಟ್ಟ ವ್ಯಕ್ತಿಯ ನೇಮಕಾತಿ/ಬಡ್ತಿಯಂತೆ, ಕೇವಲ ಆಡ್‌ಹಾಕ್ ಆಧಾರದ ಮೇಲೆ ಮಾಡಿರುವುದರಿಂದ, ಸಕ್ಷಮ ಪ್ರಾಧಿಕಾರದ ಮೂಲಕ ಮಾಡಿದ ಆದೇಶದ ಮೂಲಕ ಅಂಥ ಆಡ್‌ಹಾಕ್ ನೇಮಕಾತಿಯಿಂದ ಆತನು ಮುಂದುವರೆಸುವುದನ್ನು ನಿಲ್ಲಿಸಿರುವಾಗ ಮತ್ತು ಆತನ ಮೂಲ ಹುದ್ದೆಗೆ ನಿಯೋಜಿಸಿರುವ ಕೇವಲ ಆಡ್‌ಹಾಕ್ ಮತ್ತು ತಾತ್ಕಾಲಿಕ ಆಧಾರದ ಮೇಲೆ ನಿಯೋಜಿಸಿದ್ದು, ಆತನು ಅದರಲ್ಲಿ ಅಧಿಕಾರ

1. (2011) 11 ಎಸ್‌ಸಿಸಿ 441
2. (1998) 5 ಎಸ್‌ಸಿಸಿ 450

ಅಥವಾ ಆ ಹುದ್ದೆಗೆ ಹಕ್ಕನ್ನು ಹೊಂದಿಲ್ಲದಿರುವುದರಿಂದ ತಾನು ಹಸ್ತಕ್ಷೇಪ ಮಾಡಲಾಗದು. ಈ ತೀರ್ಪು, ಪ್ರಸ್ತುತ ಪ್ರಕರಣದ ಸಂಗತಿಗಳಿಗೆ ಅನ್ವಯಿಸುತ್ತದೆ. ಆದ್ದರಿಂದ, ಅರ್ಜಿದಾರರು, ಆ ಹುದ್ದೆಗೆ ನಿಹಿತಗೊಳಿಸಲಾದ ಯಾವುದೇ ಹಕ್ಕನ್ನು ಹೊಂದಿರಲಾರರು, ಪ್ರಶ್ನಿತ ಅಧಿಸೂಚನೆಯ ವಿರುದ್ಧ ಯಾವುದೇ ಕಾನೂನು ಕುಂದುಕೊರತೆಯಂತೆ ಆಲಿಸಲಾಗದು.

15. ಅರ್ಜಿದಾರರು, ಈ ನ್ಯಾಯಾಲಯದ ಮಧ್ಯಕಾಲೀನ ಆದೇಶದ ಅನುಕೂಲ ಪಡೆದುಕೊಳ್ಳುವ ಮೂಲಕ, ಆಡ್‌ಹಾಕ್ ತಾತ್ಕಾಲಿಕ ಏರ್ಪಾಡನ್ನು ಮಾತ್ರ ಮಾಡಲಾಗಿದ್ದರೂ ಕಳೆದ ಮೂರು ವರ್ಷಗಳು ಬೆಂಗಳೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಹುದ್ದೆಯಲ್ಲಿ ಇದ್ದರೆಂಬುದನ್ನು ಈ ಹಂತದಲ್ಲಿ ಹೇಳಬಹುದಾಗಿದೆ. ಆದ್ದರಿಂದ, ಈ ನ್ಯಾಯಾಲಯ, ಇತರೇ ಯಾರೇ ಸೂಕ್ತ ವ್ಯಕ್ತಿಯನ್ನು, ತಾತ್ಕಾಲಿಕ ಅಥವಾ ಆಡ್‌ಹಾಕ್ ವ್ಯವಸ್ಥೆಯ ಮೂಲಕ ಕಾನೂನಿನ ಅನುಸಾರವಾಗಿ ಏರ್ಪಾಡು ಮಾಡುವುದಕ್ಕೆ ಹಾಗೂ ಆ ಹುದ್ದೆಯನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಪರ್ಯಾಯ ಏರ್ಪಾಟನ್ನು ಮಾಡುವುದರಿಂದ ಸರ್ಕಾರವನ್ನು ತಡೆಯಲಾಗದು.

ಹಾಗಾಗಿ, ಈ ರಿಟ್ ಅರ್ಜಿಯು ಯಾವುದೇ ಗುಣಾರ್ಹತೆಗಳನ್ನು ಹೊಂದಿಲ್ಲದಿರುವುದರಿಂದ, ವಜಾಗೊಳಿಸಲಾಗಿದೆ.

---